

ಇಳಿವಯಸ್ಸು ಹಾಗೂ ಅನಾರೋಗ್ಯದಿಂದಾಗಿ ಅಪ್ಪಾ ಸಾಹೇಬರು ಚುನಾವಣಾ ಕಣದಿಂದ ಹಿಂದೆ ಸರಿದಿದ್ದರು. ಅವರ ದತ್ತುಪುತ್ರನೆಂದು ಬಿಂಬಿಸಿಕೊಳ್ಳುತ್ತಿದ್ದ ಸುಭಾಷ್ ವಾಘ್ಮೊರೆ ಅಪ್ಪಾ ಸಾಹೇಬರ ವರ್ಚಸ್ಸಿನಿಂದಾಗಿ, ತಾನು ಅವಿರೋಧವಾಗಿ ಆರಿಸಿ ಬಂದು ಕಾರ್ಪೊರೇಟರ್ ಆಗುವುದು ನಿಶ್ಚಿತ ಎಂದು ಭಾವಿಸಿದ್ದ. ಆದರೆ, ಆತನ ಲೆಕ್ಕಾಚಾರ ಫಲಿಸಲಿಲ್ಲ. ಅಪ್ಪಾ ಸಾಹೇಬರ ನಿಕಟವರ್ತಿಯಾಗಿದ್ದ ಪರಮೇಶ್ವರ ಹೆಗಡೆ, ವಾಘ್ಮೊರೆಗೆ ಸಡ್ಡು ಹೊಡೆಯಲು ಚುನಾವಣಾ ರಂಗಕ್ಕೆ ಧುಮುಕಿದ್ದ.

ನಾಮಪತ್ರ ಹಿಂದೆಗೆದುಕೊಳ್ಳುವಂತೆ ವಾಘ್ಮೊರೆ, ಪರಮೇಶ್ವರ ಹೆಗಡೆಗೆ ಇನ್ನಿಲ್ಲದ ಆಮಿಷಗಳನ್ನು ಒಡ್ಡಿದ್ದ. ಲಕ್ಷಗಟ್ಟಲೆ ಹಣ, ಪುಕ್ಕಟೆ ಫ್ಲ್ಯಾಟು, ತಾನು ಜಯ ಗಳಿಸಿದರೆ ತನ್ನ ಆತ್ಮೀಯ ಬಳಗದಲ್ಲಿ ಸೇರಿಕೆ ಇತ್ಯಾದಿ ಎಲ್ಲ ವಾಗ್ದಾನಗಳನ್ನು ಪರಮೇಶ್ವರ ಹೆಗಡೆಯ ಮುಂದಿಟ್ಟಿದ್ದ. ವಾಘ್ಮೊರೆಯ ಯಾವ ಹಿಕ್ಮತಿಗೂ ಹೆಗಡೆ ಜಗ್ಗದಿದ್ದಾಗ, ಯುವತಿಯೊಬ್ಬಳೊಂದಿಗೆ ಆತ ರಾಸಲೀಲೆ ನಡೆಸುತ್ತಿದ್ದನೆನ್ನುವಂತಹ ಅಶ್ಲೀಲ ನಕಲಿ ವಿಡಿಯೊ ಸೃಷ್ಟಿಸಿ, ಅದನ್ನು ಮಾಧ್ಯಮದವರಿಗೆ ಬಿಡುಗಡೆ ಮಾಡಿ, ಅದು ವೈರಲ್ ಆಗುವಂತೆ ನೋಡಿಕೊಂಡ. ತನ್ನ ಚಾರಿತ್ರ್ಯ ಹನನವಾದರೂ, ಹೆಗಡೆ ವಾಘ್ಮೊರೆಯ ವಿರುದ್ಧ ತನ್ನ ಚುನಾವಣಾ ಪ್ರಚಾರ ಭಾಷಣಗಳಲ್ಲಿ ಚಕಾರವೆತ್ತದೆ ತಾನು ಗುರು ಸಮಾನರಾದ ಅಪ್ಪಾ ಸಾಹೇಬರ ರಚನಾತ್ಮಕ, ಪ್ರಗತಿಪರ ಕಾರ್ಯಕ್ರಮಗಳನ್ನು ಮುಂದುವರಿಸುವುದಾಗಿ ಹೇಳುತ್ತ ಬಂದ. ವಾಘ್ಮೊರೆಯು ಅಪ್ಪಾ ಸಾಹೇಬರು ಸಾಕಿ ಸಲಹಿದ ಮಗುವಾಗಿರುವುದರಿಂದ, ಆತನ ಹೇಯ ಕೃತ್ಯಗಳನ್ನು ಅಪ್ಪಾ ಸಾಹೇಬರ ಮೇಲಿನ ಗೌರವದಿಂದಾಗಿ ತಾನು ಗಣನೆಗೆ ತರುವುದಿಲ್ಲ. ಆತನಿಗೆ ಶುಭವಾಗಲಿ ಎಂದು ತನ್ನ ಪ್ರಚಾರ ಭಾಷಣಗಳಲ್ಲಿ ಹೇಳಿಕೊಂಡ.

ಪರಮೇಶ್ವರ ಹೆಗಡೆ, ಅಪ್ಪುರಾಯ ಕಾಮತ್ ಆಲಿಯಾಸ್ ಅಪ್ಪಾ ಸಾಹೇಬರ ಊರಾದ ಕಾರವಾರದ ಬಿಣಗಾದವನು. ಅಪ್ಪಾ ಸಾಹೇಬರ ಋಜು ಜೀವನ, ಮುಂಬಯಿಯಲ್ಲಿ ಅವರು ನಡೆಸುತ್ತಿದ್ದ ಸಮಾಜೋದ್ಧಾರಕ ಕಾರ್ಯಕ್ರಮಗಳು, ಮಹಾತ್ಮಾ ಗಾಂಧಿ ಹಾಗೂ ಡಾ. ಅಂಬೇಡ್ಕರರ ತತ್ತ್ವಾದರ್ಶಗಳನ್ನು ಚಾಚೂ ತಪ್ಪದೆ ಪಾಲಿಸುತ್ತಿದ್ದ ಅವರ ನಿಷ್ಠೆಯ ಕುರಿತು ಚಿಕ್ಕವನಿದ್ದಾಗ ತಂದೆ ಅವನಿಗೆ ಹೇಳುತ್ತಿದ್ದುದನ್ನು ಆತ ಮರೆತಿರಲಿಲ್ಲ. ಕಾರವಾರದ ಆಸುಪಾಸಿನಲ್ಲಿ ಹಲವು ಶಾಲೆಗಳನ್ನು ಸ್ಥಾಪಿಸಿದ್ದು ಮಾತ್ರವಲ್ಲದೆ ಬಿಣಗಾದ ಶಾಲೆ ಜಿಲ್ಲೆಯಲ್ಲಿ ಖ್ಯಾತ ವಿದ್ಯಾಮಂದಿರವಾಗಲು ಅವರು ಶ್ರಮಿಸಿದ್ದರು. ಸಾಮಾನ್ಯ ಆಟಪಾಠಗಳಲ್ಲದೆ ಮಕ್ಕಳಲ್ಲಿ ಪರಿಸರದ ಬಗ್ಗೆ ಪ್ರೀತಿ ಬೆಳೆಸಲು ವಿಭಿನ್ನ ಹೂಗಿಡಗಳು, ಆಲಂಕಾರಿಕ ಸಸ್ಯಗಳು, ಮರಮಟ್ಟುಗಳು, ಫಲವೃಕ್ಷಗಳುಳ್ಳ ವಿಶಾಲ ತೋಟವನ್ನು ನಿರ್ಮಿಸಿ ಅದಕ್ಕೆ ನೀರುಣಿಸಲು ಬಾವಿ ತೋಡಿಸಿದ್ದರು. ಇದಲ್ಲದೆ ವರ್ಷದಲ್ಲಿ ಎರಡು ಮೂರು ಬಾರಿ ಕಾಳಿ ನದಿಯ ಆಸುಪಾಸಿನಲ್ಲಿ ಬೆಳೆದ ದಟ್ಟ ಕಾಡುಗಳನ್ನು ಶಿಕ್ಷಕರ ಜೊತೆ ಸಂದರ್ಶಿಸಿ, ಪ್ರಕೃತಿಯ ಸೊಬಗನ್ನು ಮಕ್ಕಳು ಕಣ್ಣಾರೆ ಕಂಡು ಅದರ ಮಹತ್ವದ ಬಗ್ಗೆ ಅರಿವು ಮೂಡಿಸಿಕೊಳ್ಳುವಂತೆ ಮಾಡಿದ್ದರು.

ವಿಪರ್ಯಾಸವೆಂದರೆ ಅಪ್ಪಾ ಸಾಹೇಬರು ಬಿಣಗಾಕ್ಕಾಗಲಿ, ತಾವು ಸ್ಥಾಪಿಸಿದ್ದ ಶಾಲೆಗಳಿಗಾಗಲಿ ಭೇಟಿ ನೀಡಿದ್ದು ತುಂಬ ಅಪರೂಪ. ಪ್ರಾಯಶಃ ಒಂದೆರಡು ಸಲವಿದ್ದೀತು. ಶಾಲೆಗಳ ಉಸ್ತುವಾರಿ ನೋಡಿಕೊಳ್ಳಲು ತನ್ನ ಕಿರಿಯ ಸ್ನೇಹಿತನನ್ನು ಕೇಳಿಕೊಂಡಿದ್ದರು. ಅವರೇ ಪರಮೇಶ್ವರ ಹೆಗಡೆಯವರ ತೀರ್ಥರೂಪರು ಹಾಗೂ ಬಡಾ ಬಡಗುತಿಟ್ಟಿನ ಖ್ಯಾತ ಭಾಗವತರಾಗಿದ್ದ ಸುಬ್ರಾಯ ಹೆಗಡೆಯವರು. ನಿಯಮಿತವಾಗಿ ಇಂತಹದ್ದೇ ಮೇಳ ಎನ್ನದೆ ಆಗಾಗ ಕರೆಬಂದ ಯಕ್ಷಗಾನ ಮೇಳಗಳಿಗೆ ಅತಿಥಿ ಭಾಗವತರಾಗಿ ಹೋಗಿ ಬರುತ್ತಿದ್ದ ಅವರು ತಮಗೆ ಸೇರಿದ್ದ ಅಲ್ಪಸ್ವಲ್ಪ ಜಮೀನಿನಲ್ಲಿ ಎರಡು ಬೆಳೆ ತೆಗೆಯುವುದು ಹಾಗೂ ತಮ್ಮ ದೊಡ್ಡದೇ ಎನ್ನಬಹುದಾದ ಅಡಿಕೆ ತೋಟವನ್ನು ಆಳುಗಳ